ಆಗೋದು. ಅದೇ ಕಾಸಿನಾಗೆ ಬೇಸಾಯ, ಬೀಜ-ಗೊಬ್ಬರ, ಬಟ್ಟೆ-ಬರೆ, ಹುಡುಗರಿಗೆ ಉಸ್ಕೂಲು ಫೀಜು, ಮದುವೆ-ಮುಂಜಿ ಅಲ್ಲಿಗಲ್ಲಿಗೆ ನೇರೂಪ ಆಗತ್ತಿತ್ತು. ಆದರೆ ಈಸಲ ಏನಕತೆಯೋ ಗೊತ್ತಿಲ್ಲ! ನಮ್ಮ ಕುರಿಪಟ್ಲಿಗಳನ್ನು ಕೊಳ್ಳೋಕೆ ಯಾರೂ ಬರ್ಲೇ ಇಲ್ರ! ಹಿಂಗಾಗಿ ಹಬ್ಬ ಅಂಬೋದು ಅಷ್ಟಕ್ಕೆ ಅಷ್ಟೆಯಾ' ಎಂದು ಒಂದು ದೊಡ್ಡ ಸಮಸ್ಯೆಯನ್ನೇ ನಮ್ಮ ಮುಂದೆ ಇಟ್ಟರು. ಅದಕ್ಕೆ ದನಿಗೂಡಿಸಿದ ಬುಡ್ಡನಾಗಪ್ಪನವರ ಕೆಂಚಮ್ಮ, 'ಹಬ್ಬಕ್ಕೆ ಮುಂದಾಗಿ ನಡೆದ ಸಿರಾ ಸಂತೆಗೆ ನಮ್ಮ ಹಟ್ಟಿಯಿಂದ ನೂರಾರು ಕುರಿ ಹೋಗಿದ್ದೋ ಕಣಪ್ಪಾ! ಆದ್ರೆ ಹೊತ್ತು ಮುಳುಕುದ್ರೂ ಯಾವ ಸಾಬ್ರುಗಳೂ ಬರಲೇ ಇಲ್ವಂತೆ! ಅಲ್ಲೇ ಇದ್ದ ಕೆಲವರು ಆರಕ್ಕೆ ಮೂರಂಗೆ ಕೇಳಿದ್ರಂತೆ! ಆ ರೇಟಿಗೆ ಮಾರಕ್ಕೆ ಆಗದೆ, ಅಂಗೆ ಹಟ್ಟಿಗೆ ಬಂದುಬುಟ್ಟರು. ಅದ್ಕೆ ಇವತ್ತಾದರೂ ಕುರಿಪಟ್ಲಿ ಕೊಳ್ಳೋಕೆ ಯಾರಾದ್ರೂ ಸಾಬ್ರು ಬರಬಹುದು ಅಮತಾ ವತಾರಿಂದ ಇಲ್ಲೇ ರೊಪ್ಪುತ್ತಾವ ಕುಳಿತವ್ರೆ ಇವರಿಬ್ರು' ಎಂದು ದಾಸರ ಗೋವಿಂದಪ್ಪ ಮತ್ತು ಪಟೇಲ್ ಕೃಷ್ಣಪ್ಪನವರನ್ನು ತೋರಿಸುತ್ತಾ ಹೇಳಿದರು. ನಿರಾಶೆಯ ನೆರಳು ಅವರ ಕಣ್ಣುಗಳ ಮೇಲೆ ಏನನ್ನೋ ಬರೆದಿತ್ತು!

ಇವರಿಬ್ಬರ ಮಾತಿಗೆ ನಿಧಾನವಾಗಿ ದನಿಗೂಡಿಸಿದ ಕುರಿನಾಗಣ್ಣನವರ ತಿಮ್ಮಕ್ಕ ಈ ಸಾಬ್ರುಗೆ ಏನಾತಂತೆ ಈ ಸಲ! ಎಂದು ಮುಗ್ಧತೆಯಿಂದ ಬುಡ್ಡನಾಗಪ್ಪನವರ ಕೆಂಚಮ್ಮನನ್ನು ಕೇಳಿದರು. ಅದಕ್ಕೆ ಕೆಂಚಮ್ಮ, 'ಅದೇನೋ ಜಟ್ಕಾ ಅಂತೆ! ಸಾಬುರತಾವ ಯಾರೂ ಮಾಂಸ ತಗಂಬೇಡಿ ಅಂತ ಅವನ್ಯಾವನೊ ತಲೆಮಾಸದವನು ಹೇಳಿದನಂತೆ! ಅವನ ಸಲೆಗೆಟ್ಪೋಗ, ಯಾವ ಅಡ್ನಾಡಿ ನನ್ನಮಗ ಇದನ್ನಾ ಹುಟ್ಟಿಹಾಕಿದ್ನೋ ಕಾಣೆ ಕಣವ್ವ! ಅವನ ಸುಳಿ ನಾಸ್ನಾಗ! ಅದ್ಕೆ ಸಾಬರೆಲ್ಲಾ ಇವರ ಸವಾಸನೇ ಬೇಡ ಅಂತ ಸುಮ್ಮನಾದ್ರಂತೆ. ಅದ್ಕೆ ಈ ಸರ್ತಿ ಸಾಬರು ಕುರಿಪಟ್ಲಿಗೆ, ಕುರಿ ಚರ್ಮಕ್ಕೆ ನಮ್ಮ ಹಟ್ಟಿಗಳತಕ್ಕೆ ಬಂದಿಲ್ಲ! ಎಲ್ರೂ ಅಂಗಂತ ಹೇಳ್ತಾವರೆ, ಅದಕ್ಕೆ ನಾನೂ ಅಂಗೆ ಅಂದೆ' ಎಂದು ಹೇಳಿದರು. ಓಹೋ ಅದ್ಕೆ ನಮ್ಮ ಮಾವಿನ ಮರ, ಹುಣಿಸೆ, ಹೊಂಗೆಮರನ ಪಚ್ಚಮಾರ್ಗೆ ಕೇಳೋಕೆ ಸಾಬ್ರು ತಲೆಹಾಕಿಲ್ಲಕಣೇ! ಇಂಗಾದ್ರೆ ಹೆಂಗವ್ವಾ ಬಾಳ್ವೆ ಮಾಡೋದು! ಎಂದು ನಿಟ್ಟುಸಿರು ಬಿಟ್ಟರು. ನಗರಗಳಲ್ಲಾಗುವ ಗಲಭೆಗಳು, ಕಿಡಿ ಹಚ್ಚುವ ಸಂಘರ್ಷಗಳು, ವದಂತಿಗಳು ಹೇಗೆ ನಿಧಾನವಾಗಿ ನಮ್ಮ ಹಳ್ಳಿಗಳ ಆರ್ಥಿಕ ಚಟುವಟಿಕೆಗಳ ಮೇಲೂ ಪರಿಣಾಮ ಬೀರುತ್ತವೆ ಎಂಬುದನ್ನು ಕಂಡ ನನಗೆ ನಿಜವಾಗಿಯೂ ದಿಗಿಲಾಯಿತು. ಕರ್ನಾಟಕದಲ್ಲಿರುವ ಎಲ್ಲ ಗೊಲ್ಲರಹಟ್ಟಿಗಳೂ ಇದೇ ಸಂಕಟದಿಂದ ಇಂದು ಯುಗಾದಿ ಹಬ್ಬವನ್ನು ಆಚರಿಸುತ್ತಿವೆ ಎನಿಸಿತು. ಭೌತಿಕವಾಗಿ ನಡೆಯುವ ಯಾವುದೇ ಯುದ್ಧದ ಹಿಂಸೆ, ರಕ್ತಪಾತಕ್ಕಿಂತ, ಸಮುದಾಯಗಳನ್ನು ವಿಭಜಿಸುತ್ತಿರುವ ಮತಿಹೀನ ಶಕ್ತಿಗಳ ಕ್ರೌರ್ಯ ಯಾವ ಯುದ್ಧದ ಹಿಂಸೆಗಿಂತ ಕಡಿಮೆಯಿಲ್ಲ ಎನಿಸಿ ಮನಸ್ಸು ಮುದುಡಿಹೋಯಿತು.

ನಾನು ಸಂಕಟದಿಂದ ಆಕಾಶ ನೋಡುತ್ತಿದ್ದೆ. ತೆಂಕಲು ದಿಕ್ಕಿನಿಂದ ಒಂದು ಮೋಡ ನಿಧಾನವಾಗಿ ಇತ್ತಲೇ ಬರುತ್ತಿತ್ತು. ನನ್ನ ದೃಷ್ಟಿಯನ್ನೇ ನೋಡಿದ ದಾಸರ ಗೋವಿಂದಪ್ಪನವರು, 'ಅಯ್ಯೋ ಬಿಡಿ ಸ್ವಾಮಿ, ಅದು ಗೂಬಲು ಮಾಡಾ, ಮೇಲಾಗಿ ತೆಂಕಲು ದಿಕ್ಕಿನಿಂದ ಮಾಡಾ ಬಂದರೆ ಮಳೆ ಬರಾಕಿಲ್ಲ!' ಎಂದರು. ಗೊಲ್ಲ ಗೌಡರಾದ ಕೃಷ್ಣಪ್ಪನವರು, 'ಹೆಂಗೋ ವರ್ಸಕ್ಕೊಂದು ಹಬ್ಬದ ದಿನ, ನಮ್ಮ ಹಟ್ಟಿಗೆ ಬಂದಿದ್ದೀರಾ, ಅಂಗೇ ಒಬ್ಬಟ್ಟಿನ ಊಟ ಮಾಡಿಕೊಂಡು ಹೋಗಿ ಸ್ವಾಮಿ. ಅಂಗೇ ಹೋಗಬೇಡಿರಿ' ಎಂದು ಎಷ್ಟು ಸಾಧ್ಯವೋ ಅಷ್ಟು ಮೃದುವಾಗಿ ಹೇಳಿದರು. ನನಗೆ ಹಸಿವಾಗಿದ್ದರೂ ಏಕೋ ಊಟದ ಕಡೆ ಮನಸ್ಸು ಹರಿಯಲಿಲ್ಲ. ಏನೋ ಒಂದು ಬಗೆಯ ಕಳವಳ, ಸಂಕಟ ಆವರಿಸಿಕೊಂಡಿತು. ಆದರೂ ಅದನ್ನು ತೋರ್ಪಡಿಸಿಕೊಳ್ಳದೆ, ನಾಗರಾಜು ಅವರ ಮನೆಗೆ ಹೊರಟೆವು.

ಮೂಡ್ಲು ಮಣೇವು ಆಚರಿಸುವುದರಿಂದ ಅಡವಿ ಹುಲ್ಲು, ಮಡಗಿನ ನೀರು ಹೆಚ್ಚಾಗುತ್ತದೆ ಎನ್ನುವ ನಂಬಿಕೆ ಕಾಡುಗೊಲ್ಲರಲ್ಲಿದೆ. ಆಧುನಿಕ ಜಗತ್ತು ನಮ್ಮ ಸಮಾಜದ ಮುಂದೆ ತಂದು ಸುರಿದಿರುವ ಅಗಣಿತ ವಿಲಾಸಿ ಸಂಸ್ಕೃತಿಯ ವಿಕಟಾನುಕರಣೆ ಮಾಡದ ಕಾಡುಗೊಲ್ಲರು, ತಮ್ಮ ಬುಡಕಟ್ಟು ಸಂಸ್ಕೃತಿಯನ್ನು ಅದರ ಅಸಲಿ ರೂಪದಲ್ಲಿ ಬಳಸಿಕೊಂಡು ಬದುಕುತ್ತಿದ್ದಾರೆ. ಈ ಆಧುನಿಕತೆ ಎನ್ನುವುದು ಬುಡಕಟ್ಟು ಸಂಸ್ಕೃತಿಗಳ ಪೀಡಕ ಎಂಬುದನ್ನು ಎಲ್ಲರಿಗಿಂತ ಮೊದಲೇ ಅರಿತಿರುವ ಕೆಲವೇ ಸಮುದಾಯಗಳಲ್ಲಿ ಕಾಡುಗೊಲ್ಲರದೂ ಒಂದು. ●